ದಿನಾಂಕ :7 ನೇ ಅಕ್ಟೋಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>.

ಆರೋಪಿ ನಮ್ಮ ಬ್ಯಾಂಕ್ ನಲ್ಲಿ ಸುಮಾರು 5-6 ವರ್ಷಗಳಿಂದ ಗ್ರಾಹಕರಾಗಿದ್ದಾರೆ. ಆರೋಪಿ ಈ ಹಿಂದೆಯೂ ಸಾಲ ಪಡೆದಿದ್ದರು. ಆರೋಪಿ ಈ ಹಿಂದೆ ಸಾಲ ಪಡೆದಾಗ ನಮಗೆ ಚೆಕ್ ನೀಡಿರಲಿಲ್ಲ. ಆರೋಪಿ ಮುದ್ರಾ ಸಾಲ ಪಡೆದಿದ್ದರು. ಆರೋಪಿ ಮಾಡುವ ವ್ಯವಹಾರದ ಪರವಾನಿಗೆ ನೋಡಿ ಮುದ್ರಾ ಸಾಲ ನೀಡಿರುತ್ತೇವೆ. ಆರೋಪಿ ಅಂಗಡಿ ಹಾಗೂ ಹೋಟೆಲ್ ನಡೆಸುತ್ತಿದ್ದರು. ದಿ.11.02.2020 ರಂದು ಆರೋಪಿ ಈ ಪ್ರಕರಣದ ಮುದ್ರಾ ಸಾಲ ಪಡೆದಿದ್ದರು. ಆರೋಪಿ ಸಾಲ ಪಡೆಯುವಾಗ ನಮಗೆ ಚೆಕ್ ನೀಡಿದ್ದಾರು ಎಂದರೆ ಸರಿಯಲ್ಲ. ಆರೋಪಿ ಸಾಲ ಬಾಕಿ ಆದಾಗ ಅವರ ಮನೆಗೆ ಹೋಗಿ ಕೇಳಿದಾಗ ಆರೋಪಿ ಚೆಕ್ ತಂದು ನೀಡಿರುತ್ತಾರೆ. ನಮ್ಮ ಬ್ಯಾಂಕಿನವರು ಆರೋಪಿ ಮನೆಗೆ ಸಾಲ ವಸೂಲಾತಿಗೆ ಹೋಗಿರುತಾರೆ. ಸಾಲ ವಸೂಲಾತಿಗೆ ಹೋದಾಗ ಚೆಕ್ ನೀಡಿದ್ದರು ಎಂದು ದೂರಿನಲ್ಲಿ ತಿಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಅಂಗಡಿ ಹಾಗೂ ಹೋಟೆಲ್ ನಡೆಸುತ್ತಿದಾರೆ ಎಂಬ ಬಗ್ಗೆ ಪರವಾನಿಗೆ ನಾವು ಪಡೆದಿದ್ದೇವೆ ಆದರೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ, ಹಾಜರುಪಡಿಸಲು ತೊಂದರೆ ಇಲ್ಲ ಎನ್ನುತ್ತಾರೆ. ಆರೋಪಿ ಹಿಂದಿನ ಸಾಲವನ್ನು ಯಾವಾಗ ಮರು ಪಾವತಿ ಮಾಡಿದ್ದರು ಎಂದು ನೆನಪಿಲ್ಲ.

ಆರೋಪಿ ಸ್ವಲ್ಪ ಹಣ ಮರುಪಾವತಿಸಿದ್ದಾರೆ, ಎಷ್ಟು ಹಣ ಎಂದು ಈಗ ನೆನಪಿಲ್ಲ. ಆರೋಪಿ ಹಣ ಪಾವತಿ ಮಾಡಿರುವ ಬಗ್ಗೆ ನಾವು ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ಹಾಜರುಪಡಿಸಿಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

sd/-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.